ಹೇಮಾವತಿ ಯೋಜನೆಯ ಕಾಮಗಾರಿಗಳನ್ನು ನಿಲ್ಲಿಸಿರುವುದು

3208 (3717) ಶ್ರೀ ಎಂ.ಡಿ ಲಕ್ಷ್ಮೀನಾರಾಯಣ (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷದಲ್ಲಿ ಹೇಮಾವತಿ ಯೋಜನೆಯಲ್ಲಿ ಎಷ್ಟು ರೂ.ಗಳ ಮೊತ್ತದ ಕಾಮಗಾರಿಗಳನ್ನು ಮಂಜೂರು ಮಾಡಲಾಗಿತ್ತು;

ಆ) ಹಾಗಿದ್ದಲ್ಲಿ ಎಷ್ಟು ಕಾಮಗಾರಿಗಳು ಮುಗಿದಿವೆ; ಉಳಿದಿರುವ ಕಾಮಗಾರಿಗಳು ಯಾವ ಹಂತದಲ್ಲಿವೆ;

ಇ) ಈ ಕಾಮಗಾರಿಗಳ ಹಣವನ್ನು ಪೂರ್ತಾ ನೀಡಲಾಗಿದೆಯೇ; ಎಷ್ಟು ನೀಡಲಾಗಿದೆ;

ಈ) ಕಾಮಗಾರಿಗಳ ಹಣವನ್ನು ನೀಡಲಿಕ್ಕೆ ಏನಾದರೂ ನೀತಿ ನಿಬಂಧನೆ ಇದೆಯೇ;

ಉ) ಉಳಿದಿರುವ ಕಾಮಗಾರಿಗಳ ಹಣವನ್ನು ಎಷ್ಟು ದಿನದಲ್ಲಿ ಕೊಡಲಾಗುವುದು;

ಊ) ಇತ್ತೀಚೆಗೆ ಕೆಲಸಗಳನ್ನು ನಿಲ್ಲಿಸಲು ಕಾರಣವೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕಳೆದ ಮೂರು ವರ್ಷದಲ್ಲಿ ಹೇಮಾವತಿ ಯೋಜನೆಯಡಿ ಒಟ್ಟು ರೂ. 7535.09 ಲಕ್ಷಗಳ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.

ಗೊರೂರು ವಲಯ	–	ರೂ. 107.27 ಲಕ್ಷಗಳು
ತುಮಕೂರು ವಲಯ	–	ರೂ. 7427.82 ಲಕ್ಷಗಳು
	ಒಟ್ಟು	**ರೂ. 75.35.09 ಲಕ್ಷಗಳು**

ಆ) 4059 ಕಾಮಗಾರಿಗಳು ಪೂರ್ಣಗೊಂಡಿದ್ದು, 2813 ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತದೆ.

ವಲಯ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿ ಕಾಮಗಾರಿಗಳು
ಗೊರೂರು	3757	2034
ತುಮಕೂರು	302	779
ಒಟ್ಟು	**4059**	**2813**

ಇ) ಸದರಿ ಕಾಮಗಾರಿಗಳ ಪ್ರಗತಿಯ ಆಧಾರದ ಹಣ ನೀಡಲಾಗಿದೆ. ಒಟ್ಟಾರೆ ಕಾಮಗಾರಿಗಳಿಗೆ ಇದುವರೆವಿಗೂ ರೂ. 10358.36 ಲಕ್ಷಗಳನ್ನು ನೀಡಲಾಗಿದೆ.

ಗೊರೂರು ವಲಯ	–	ರೂ. 7743.00 ಲಕ್ಷಗಳು
ತುಮಕೂರು ವಲಯ	–	ರೂ. 2615.36 ಲಕ್ಷಗಳು
	ಒಟ್ಟು	**ರೂ. 10358.36 ಲಕ್ಷಗಳು**

ಈ) ಸರ್ಕಾರದ ಮಾರ್ಗಸೂಚಿಯನುಸಾರ ಪಾವತಿ ಮಾಡಲಾಗುತ್ತಿದೆ.

ಉ) ಅನುದಾನದ ಲಭ್ಯತೆಯ ಅನುಸಾರ ಉಳಿಕೆ ಹಣವನ್ನು ಪಾವತಿಸಲಾಗುವುದು.

ಊ) ಕಾಮಗಾರಿಗಳು ನಿಯಮಗಳಂತೆ ಚಾಲ್ತಿಯಲ್ಲಿರುತ್ತವೆ.